ಅಧ್ಯಕ್ಷರು : ಎರಡು ತಿಂಗಳಲ್ಲೆ ಶಿಫ್ಟ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ : ಎರಡೇ ತಿಂಗಳು ಎಂದರೆ ಎರಡು ತಿಂಗಳಲ್ಲಿ ಮಾಡುವುದಿಲ್ಲ. ಕೆಲವು ರಾಜಕೀಯ ಒತ್ತಡಗಳು ಇವೆ.

ಅಧ್ಯಕ್ಷರು : ಹೈಪಾಥೆಟಿಕಲ್ ಕ್ವೆಶ್ಚನ್ ಕೇಳಬೇಡಿ.

ಶ್ರೀ ಎನ್. ಸಂಪಂಗಿ : ಎರಡು ತಿಂಗಳಲ್ಲಿ ಮಾಡಿಕೊಟ್ಟರೆ ನಿಜವಾಗಿಯೂ ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಆರ್. ಬಿ. ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಪಂಗಿ ಅವರು ಸಹಕಾರ ಕೊಟ್ಟರೆ ಎರಡೇ ತಿಂಗಳಲ್ಲಿ ನಾವು ಮುಗಿಸುತ್ತೇವೆ.

ಅಧ್ಯಕ್ಷರು : ಸಹಕಾರ ಕೊಡುತ್ತಾರೆ.

ಶೇಂದಿ ವನ ಒತ್ತುವರಿ ಮಾಡಿರುವುದು

112 (1044) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿರುವ ಶೇಂದಿ ವನದಲ್ಲಿ ಒತ್ತುವರಿ ಮಾಡಿ ಬಡ ರೈತರು ತೆಂಗಿನಮರ ಮಾವಿನಮರ ಮುಂತಾದ ಬೆಳೆಗಳನ್ನು ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸದರಿ ಒತ್ತುವರಿಯನ್ನು ಒತ್ತುವರಿದಾರರಿಗೆ ಕಾನೂನು ರೀತ್ಯಾ ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ? ಸಕ್ರಮಗೊಳಿಸಲು ಆದೇಶವನ್ನು ಯಾವಾಗ ಹೊರಡಿಸಲಾಗುವುದು;

ಇ) ಶೇಂದಿ ವನದ ವಿಸ್ತೀರ್ಣವೆಷ್ಟು; ಇದರಲ್ಲಿ ಎಷ್ಟು ಎಕರೆ ಒತ್ತುವರಿಯಾಗಿದೆ ; ಒತ್ತುವರಿ ಮಾಡಿದ ಜಾಗದಲ್ಲಿ ತೆಂಗಿನ ಮರ, ಮಾವಿನ ಮರಗಳ ವಯಸ್ಸು ಎಷ್ಟು?

ಶ್ರೀ ಹೆಚ್. ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಸಕ್ರಮಗೊಳಿಸಲು ನಿಯಮಾವಳಿಗಲ್ಲಿ ಅವಕಾಶವಿರುವುದಿಲ್ಲ.

ಇ) ಶೇಂದಿ ವನದ ವಿಸ್ತೀರ್ಣ : 3449. 19 ಎಕರೆ ಒತ್ತುವರಿಯಾಗಿರುವ ವಿಸ್ತೀರ್ಣ : 3051. 31 ಎಕರೆ ಅಂದಾಜು ಮಾಡಲಾಗಿದೆ.

ತೆಂಗಿನ, ಮಾವಿನ ಮರದ ವಯಸ್ಸು ಅಂದಾಜು 10- 15 ವರ್ಷವಿರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಒತ್ತುವರಿ ಮಾಡಿದ್ದಾರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಸಚಿವರು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆದರೆ ಆ ಒತ್ತುವರಿ ಮಾಡಿರುವುದನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಕ್ಕೆ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ನಾನು ಈ

ಸರ್ಕಾರದ ಮೇಲೆ ಆರೋಪ ಮಾಡುತ್ತಿಲ್ಲ. 30-40 ವರ್ಷಗಳಿಂದ ಈ ರೀತಿ ಆಗಿದೆ. ಅವರು ಕೊಟ್ಟಿರುವಂತಹ ಉತ್ತರದಲ್ಲಿ ಏನು ಹೇಳಿದ್ದಾರೆ. ಎಂದರೆ 3449 ಎಕರೆ ಎಂದು ಇದ್ದರೆ, 3051 ಎಕರೆಯಲ್ಲಿ ಅಕ್ರಮವಾಗಿ ಇವತ್ತು ತೆಂಗಿನ ಮರವನ್ನು ಬೆಳೆದಿದ್ದಾರೆ. ಅವರು ಹತ್ತು ಹದಿನೈದು ವರ್ಷ ಎಂದು ಹೇಳಿದ್ದಾರೆ. ಆ ಒಂದು ಸೇಂದಿ ವನ ಏನು ಇದೆ, ಅದು ಇವತ್ತು ಶ್ರೀಮಂತರ ಕೈಯಲ್ಲಿ ಇದೆ. ಬಡವರ ಕೈಯಲ್ಲಿ ಏನೂ ಇಲ್ಲ. ಆದರೆ ಹತ್ತು ಹದಿನೈದು ವರ್ಷದಿಂದ ಅವರ ಕೈಯಲ್ಲಿದ್ದರೂ ರೆವಿನ್ಯೂ ಇಲಾಖೆಯವರು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಮುಂದೆ ಏನು ಕ್ರಮ ತೆಗೆದುಕೊಳ್ಳಬಹುದು? ಅದನ್ನು ಚರ್ಚೆ ಮಾಡಲು ಸರ್ಕಾರ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟರೆ ಅನುಕೂಲ ಅಕ್ರಮ ಸಕ್ರಮ ಸಮಿತಿಯಲ್ಲಿ ಹೆಚ್ಚು ಕಡಿಮೆ ಐ12, 13 ಸಾವಿರ ಅರ್ಜಿ ಬಂದಿದ್ದರೆ, ಸೇಂದಿ ವನದ್ದೇ ಹೆಚ್ಚು ಕಡಿಮೆ 4, 5 ಸಾವಿರ ಅರ್ಜಿಗಳು ಇದ್ದಾವೆ. ಅದರಿಂದ ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಇದು ಗಂಭೀರವಾದಂತಹ ಪ್ರಶ್ನೆ ಎಂದು ತಿಳಿದು ಸರಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಸಿ. ಶ್ರೀ ಕಂಠಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇ ಒಪ್ಪಿಕೊಳ್ಳುತ್ತಿದ್ದಾರೆ, ಕಳೆದ ಮೂವತ್ತು ನಲವತ್ತು ವರ್ಷಗಳಿಂದ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿ. ಈಗ ನಾನಾದರೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ಎಷ್ಟು ಎಕರೆ ಕರ್ನಾಟಕ ರಾಜ್ಯದಲ್ಲಿ ಸೇಂದಿ ವನ ಇದೆ, ಅದನ್ನೆಲ್ಲಾ ಅಂಕಿ ಅಂಶಗಳನ್ನು ತರಿಸಿ ಯಾವ ರೀತಿ ಅದಕ್ಕೆ ರೂಪರೇಷೆ ತಯಾರು ಮಾಡಬೇಕೆಂದು ವಿಚಾರ ಮಾಡುತ್ತೇನೆ. ಕಳೆದ ಅಧಿವೇಶನದಲ್ಲಿ ನಾನು ಹೇಳಿದ್ದೇನೆ. ಇದನ್ನು ಆದಷ್ಟು ಜಾಗ್ರತೆ ಸಕ್ರಮ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದನ್ನು ಯಾವರೀತಿ ಮಾಡಬೇಕು ಎನ್ನತಕ್ಕದರ ಬಗ್ಗೆ ಸರ್ಕಾರ ಸಚಿವಸಂಪುಟದಲ್ಲಿ ತೀರ್ಮಾನ ಮಾಡಿ ಕಾರ್ಯಕ್ರಮ ಹಾಕುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಈಗ ಹೆಚ್ಚು ಕಡಿಮೆ 1977ರಲ್ಲಿ ಸರ್ಕಾರ ಕೆಲವೊಂದು ಸೇಂದಿ ವನವನ್ನು ರಿಲೀಸ್ ಮಾಡಿದೆ. ದಯವಿಟ್ಟು ಅದಕ್ಕಾದರೂ ಮಾನ್ಯ ಕಂದಾಯ ಸಚಿವರು ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಗೆ ತಹಶೀಲ್ದಾರ್‌ಗಳಿಗೆ ತಿಳಿಸಬೇಕು. ತಿಳಿಸಿ ನಮ್ಮ ಅಕ್ರಮ ಸಕ್ರಮ ಸಮಿತಿಯಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲಿಕ್ಕೆ 1977-78ರಲ್ಲಿ ಸೇಂದಿ ವನವನ್ನು ರಿಲೀಸ್ ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಂಡಿತ್ತು. ಅದರ ಬಗ್ಗೆ ಸರ್ಕಾರ ಸ್ವಲ್ಪ ಕ್ರಮ ಕೈಗೊಂಡರೆ ರೈತರಿಗೆ ಒಂದು ಅನುಕೂಲ ಮಾಡಬಹುದು ಎನ್ನುವ ವಿಚಾರ ಇದೆ. ಮತ್ತು 25-30 ವರ್ಷಗಳಿಂದ ಮಾವಿನ ಮರ, ತೆಂಗಿನ ಮರವನ್ನು ಬೆಳೆದಿದ್ದಾರೆ ಅವರಿಗೆ ನಾವು ಕಂದಾಯವನ್ನು ನಿಗದಿ ಮಾಡಿದರೆ ಸರ್ಕಾರಕ್ಕೆ ರೆವಿನ್ಯೂ ಬರುವ ವ್ಯವಸ್ಥೆ ಆಗುತ್ತದೆ ಎನ್ನುವ ಒಂದು ವಿಚಾರವನ್ನು ಕೂಡ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಎಚ್.ಸಿ ಶ್ರೀಕಂಠಯ್ಯ : ಸನ್ಮಾನ್ಯ ಅಧ್ಯಕ್ಷರೆ, ಸದ್ಯದ ಪರಿಸ್ಥಿತಿಯಲ್ಲಿ ನಿಯಮಾವಳಿಯಲ್ಲಿ ಅವಕಾಶ ಇಲ್ಲ. ನಾನು ಈಗಾಗಲೇ ಹೇಳಿದ್ದೇನೆ. ಯಾವ ರೀತಿ ಮಾಡಬೇಕು ಎಂಬುದಕ್ಕೆ ಕಾನೂನು ತಿದ್ದುಪಡಿ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ರಾಜ್ಯದ ಒಟ್ಟು 82,716 ಎಕರೇ ಸೇಂದಿ ವನ ಇರತಕ್ಕದ್ದು. ಅದರಲ್ಲಿ ಅತಿಕ್ರಮ ಆಗಿರತಕ್ಕದ್ದು 54,274. ಈ 54,274 ಎಕರೆಯಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯವರದು 23,227. ಸದ್ಯದ ಈ ನಿಯಮಾವಳಿಯಲ್ಲಿ ಸಕ್ರಮ ಮಾಡುವುದಕ್ಕೆ ಎಂಬ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.